ಶ್ರೀ ಬಿ. ಬೈರಪ್ಪಾಜಿ.—ನಮ್ಮ ರಾಜ್ಯದಲ್ಲಿ ಪ್ರಮುಖವಾದ ಬೆಳೆಗಳು ಅಂದರೆ ರಾಗಿ ಬತ್ತ ಕಡಲೆಕಾಯಿ ಆಗಿರುತ್ತದೆ. ಇವುಗಳನ್ನು ಮುಂದಿನ ವರ್ಷವೇ ಪ್ರಾಯೋಗಿಕವಾಗಿ ಕೆಲವು ಜಿಲ್ಲೆಗಳನ್ನು ಆರಿಸಿಕೊಂಡು ತಾವು ಏಮೆ ಯೋಜನೆಯನ್ನು ಜಾರಿಗೆ ತರತಕ್ಕಂಥ ಕಾರ್ಯವನು ಕೈಗೊಳ್ಳುತ್ತೀರಾ ?

ಶ್ರೀ ಎನ್. ಚಿಕ್ಕೇಗೌಡ.—ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಬೇರೆ ರಾಜ್ಯಗಳಲ್ಲಿಯೂ ಕೆಲವು ಬೆಳೆಗಳನ್ನು ತೆಗೆದುಕೊಂಡು ಕ್ಯಾಷ್ ಕ್ರಾಪ್ಸ್‌ಗೆ ಮಾಡಿದ್ದಾರೆ. ಅವರ ಅನುಭವ ಪಡೆದುಕೊಂಡು ನಮ್ಮಲ್ಲಿಯೂ ರಾಗಿ ಭತ್ತ ಇವುಗಳಿಗೆ ಪಾರೆಂಬರಿ ಬೆನೀಸ್‌ಮೇಲೆ ಮತ್ತು ಪ್ರಾಯೋಗಿಕವಾಗಿ ಮಾಡಲು ಸರ್ಕಾರದವರು ಒಂದು ತೀರ್ಮಾನ ತೆಗೆದುಕೊಂಡು ಅದನ್ನು ನಾನು ಹೇಳಿದಹಾಗೆ ಜನರಲ್ ಇನ್‌ಸೂರೆನ್ಸ್ ಕಾರ್ಪೊರೇಷನ್ ಮತು ಪುಡ್ ಕಾರ್ಪೊರೇಷನ್ ವರದಿ ಬಂದಮೇಲೆ ಸರ್ಕಾರ ಪರಿಶೀಲನೆ ಮಾಡುತ್ತದೆ.

MADAM SPEAKER.—Now Questions are over.

QUESTIONS FOR ANSWERS ON THE DAY
(but not taken up)

ತಾಲ್ಲೂಕು ಅಭಿವೃದ್ಧಿ ಮಂಡಲಿಯ ಆಸ್ಪತ್ರೆಗಳನ್ನು ಸರ್ಕಾರದವರು ವಹಿಸಿಕೊಳ್ಳುವುದು

39. ಶ್ರೀ ಆರ್. ರಾಜೇಗೌಡ (ಹಾನೂರು).—ಆರೋಗ್ಯ ಮಂತ್ರಿಗಳು ಈ ವಿಷಯ ಗಳನ್ನು ದಯೆಯಿಟ್ಟು ತಿಳಿಸುವರೆ ;—

(ಅ) ರಾಜ್ಯದಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಲಿಯ ವಶದಲ್ಲಿರುವ ಆಸ್ಪತ್ರೆಗಳ ಸಂಖ್ಯೆ ಎಷ್ಟು ;

(ಆ) ಮೇಲ್ಕಂಡ ಆಸ್ಪತ್ರೆಗಳನ್ನು ಸರ್ಕಾರ ತೆಗೆದುಕೊಳ್ಳಬೇಕೆಂದು ಯಾವಾಗ ನಿರ್ಣಯ ವಾಯಿತು ;

(ಇ) ಈ ಪೈಕಿ ಎಷ್ಟು ಆಸ್ಪತ್ರೆಗಳನ್ನು ಸರಕಾರ ತೆಗೆದುಕೊಂಡಿದೆ ;

(ಈ) ತೆಗೆದುಕೊಳ್ಳದಿದ್ದರೆ ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ (ಆರೋಗ್ಯ ಶಾಖೆಯ ಮಂತ್ರಿಗಳು).—

(ಅ) ೬೮೮

(ಆ) ಈ ಪ್ರಶ್ನೆಯ ಸರ್ಕಾರದವರ ಪರಿಶೀಲನೆಯಲ್ಲಿದೆ.

(ಇ) ಒಂದು.

(ಈ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

Bangalore District Central Co-operative Wholesale Stores

205. SRI R. V. KADAM (Nipani) —Will the Minister for Co-operation be pleased to state :—

(*a*) whether any enquiry was conducted about the affairs of the Bangalore District Central Co-operative Wholesale Stores ;

(*b*) if so, when and the action taken after the enquiry ?